ಆ) ಜನವರಿ, ೧೯೮೪ ರವರೆಗೆ ಮೇಲ್ಮಟ್ಟದ ನಾಲೆಗೆ ಆಗಿರುವ ವೆಚ್ಚ

೬೮.೦೯ ಲಕ್ಷ ರೂ. ಗಳು.

ಜನವರಿ, ೧೯೮೪ ರವರೆಗೆ ಕೆಳಮಟ್ಟದ ನಾಲೆಗೆ ಆಗಿರುವ ವೆಚ್ಚ

೨೧.೨೦ ಲಕ್ಷ ರೂ. ಗಳು.

ಇ) ೧೯೮೪-೮೫ ರ ಖಾರಿಫ್‌ನಲ್ಲಿ ೧,೧೦೯ ಹೆಕ್ಟೇರು ನೀರಾವರಿ ಸಾಮರ್ಥ್ಯ ಒದಗಿಸುವ ಕಾರ್ಯಕ್ರಮವಿದೆ. ಯೋಜನೆಯು ಜೂನ್ ೧೯೮೬ರ ವೇಳೆಗೆ ಮುಗಿಯುವ ನಿರೀಕ್ಷೆ ಇದೆ.

ಬಂಟವಾಳ ತಾಲ್ಲೂಕಿನ ಕರ್ಮಾರು ಗುಂಡಿ ಎಂಬಲ್ಲಿ ಏತ ನೀರಾವರಿ ಯೋಜನೆ ಬಗ್ಗೆ

೩೫೮ (೧೨೬೩) ಶ್ರೀ ಎ. ರುಕ್ಮಯ್ಯ ಪೂಜಾರಿ (ವಿಟ್ಲ).—ಮಾನ್ಯ ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಬಂಟವಾಳ ತಾಲ್ಲೂಕಿನ ಬಡಗ ಬೆಳ್ಳೂರು ಗ್ರಾಮದಲ್ಲಿ ಗುರುಪುರ ಹೊಳೆಯ ಕರ್ಮಾರು ಗುಂಡಿ ಎಂಬಲ್ಲಿ ಯಾತ ನೀರಾವರಿ ಯೋಜನೆ ಪ್ರಾರಂಭ ಮಾಡುವ ಆಲೋಚನೆ ಸರ್ಕಾರದವರಲ್ಲಿ ದೆಯೇ ?

ಆ) ಹಾಗಿದ್ದಲ್ಲಿ ಅದರ ಕೆಲಸವನ್ನು ಯಾವಾಗ ಪ್ರಾರಂಭ ಮಾಡಲಾಗುವುದು ?

ಶ್ರೀ ಆರ್. ಎನ್. ಲಕ್ಷ್ಮೀಪತಿ (ಸಣ್ಣ ನೀರಾವರಿ ರಾಜ್ಯ ಸಚಿವರು).—

ಅ) ಹೌದು.

ಆ) ಪರಿಶೀಲನೆಯಲ್ಲಿದೆ.

ರಾಯಚೂರು ಜಿಲ್ಲೆಯಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆಯಿಂದ ಒದಗುವ ನೀರಾವರಿ ಸೌಲಭ್ಯಗಳ ಬಗ್ಗೆ

೩೫೯ (೯೧೭) ಶ್ರೀ ಪಿ. ರಾಮಚಂದ್ರರಾವ್ (ಉಳ್ಳಾಲ).—ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಅ) ಕೃಷ್ಣಾ ಮೇಲ್ದಂಡೆ ಯೋಜನೆಯ ಬಲದಂಡೆ ಕಾಲುವೆಯ ಮೂಲಕ ರಾಯಚೂರು ಜಿಲ್ಲೆಯ ಯಾವ ಯಾವ ತಾಲ್ಲೂಕುಗಳಿಗೆ ನೀರನ್ನು ಒದಗಿಸಲು ಯೋಚಿಸಲಾಗಿದೆ ?

ಆ) ಈ ಬಲದಂಡೆ ಕಾಲುವೆಯಿಂದ ರಾಯಚೂರು ಜಿಲ್ಲೆಯ ಎಷ್ಟು ಎಕರೆ ಜಮೀನು ನೀರಾವರಿಯಾಗುತ್ತದೆ ?

ಇ) ಬಲದಂಡೆ ಕಾಲುವೆಯ ಕೆಲಸ ಕಾರ್ಯಗಳು ಪ್ರಾರಂಭವಾಗಿದೆಯೇ ?

ಈ) ಹಾಗಿದ್ದಲ್ಲಿ ೧೯೮೪ ರಲ್ಲಿ ಇದಕ್ಕಾಗಿ ಈವರೆವಿಗೆ ಮಾಡಿದ ವೆಚ್ಚವೆಷ್ಟು ?

ಉ) ಹಾಗಿದ್ದಲ್ಲಿ ಕಾರಣವೇನು ?

ಊ) ಸರ್ಕಾರದವರು ಈ ಕಾಲುವೆಯ ಕೆಲಸ ಚುರುಕುಗೊಳಿಸಲು ಕೈಗೊಂಡಿರುವ ಕ್ರಮ ಗಳೇನು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ) ಲಿಂಗಸುಗೂರು, ದೇವದುರ್ಗ ಮತ್ತು ರಾಯಚೂರು ತಾಲ್ಲೂಕುಗಳು.

ಆ) ೫,೦೮,೭೦೦ ಎಕರೆಗಳು ಅಥವಾ ೨,೦೫,೯೫೧ ಹೆಕ್ಟೇರುಗಳು.

ಇ) ಇನ್ನೂ ಪ್ರಾರಂಭವಾಗಿಲ್ಲ.

ಈ) (ಇ) ನಲ್ಲಿ ತಿಳಿಸಿರುವ ಉತ್ತರದಿಂದ ಇದು ಉದ್ಭವಿಸುವುದಿಲ್ಲ.